ಬರೆಯುವಾಗ ಬಾಗಿಲ ಕಡೆ ಕಣ್ಣು ಮಿಟುಕಿಸಿದರೆ ನೀನಲ್ಲೆ ನಾನಿಲ್ಲೆ ಬಾಗಿಲಲ್ಲೆ ಎಂದು ನೂರೆಂಟು ನೆನಪಿನ ಹೆಜ್ಜೆಗಳಿಗೆ ಜೋಡು ಜೊತೆಯಾಗಿದೆ. ಹೊಸಿಲ ದಾಟಿ ಒಳ ಬಾರದಿದ್ದರೂ ಮನಸು ಮೀಟಿ ಭಾವದೊಳಗೆ ಬೆರೆತಿದೆ. ಜೋಡು ಇಜ್ಜೋಡಾಗಿ ಜಡವಾಗಿ ನೇಪಥ್ಯಕ್ಕೆ ಸರಿದಾಗಲೂ ನಿರಾಕರಣೆಯಿಲ್ಲದ ಬದುಕಿನ ನಡಿಗೆಗೆ ಬೆಡಗು ತಂದಿದೆ, ಹೀಗಾಗಿ ಚಪ್ಪಲಿಯ ಕನವರಿಕೆಯ ಸದ್ದು ಜೀವಂತ.

ಆರಡಿ ಎತ್ತರದಷ್ಟೆ ಪಾದಕ್ಕೆ ಚಪ್ಪಲಿ ಹೊದಿಸಿ ಕೊಡುವಲ್ಲಿ ಅವನು ಸೋತನೊ, ನಾನೇ ಬಾಗಿ ಚಪ್ಪಲಿ ಮೆಡುವಲ್ಲಿ ಸೋತೆನೋ? ಅವನಿಲ್ಲದ ಸಮಯದಲ್ಲಿ ಹೇಳುವವರಾರು? ಇಷ್ಟಪಟ್ಟು ಹೈ ಹೀಲ್ಡ್ ಚಪ್ಪಲಿ ತಂದು ಮುಂದಿಟ್ಟು ಸಿಂಡ್ರೆಲಾಳಿಗೆ ತೊಡಿಸಲು ಬಂದ ರಾಜಕುಮಾರನಂತೆ ಕೈ ಚಾಚಿದ್ದ ನನ್ನವನು. ನಾನೋ ಹೈ ಹೀಲ್ಡ್ ನೋಡದೆ ತೊಟ್ಟೆ. ನೋಡಿದರೆ ಅವನಿಗಿಂತ ನಾಲ್ಕಿಂಚು ಎತ್ತರ. ಎತ್ತರವಾಗುವೆನೆಂದರೆ ಬಿಟ್ಟಾರೆಯೆ ಕಟ್ಟಿಕೊಂಡ ಮನೆಯವರು. ಸುತ್ತಿಗೆ ಹಿಡಿದು ತಲೆ ಕುಟ್ಟಿಯಾದರೂ ಕಿರಿದಾಗಿಸುವ ಕಟ್ಟಳೆಯವರು... ಬೆಳಗಾಗುವದರೊಳಗೆ ಜೋಡಿನ ಹಿಂಬಡಗಳನೆ ಕೊರೆದು ಕಿರಿದು ಮಾಡಿ, ಕೆರದ ಕುರುಹನೆ ಬದಲಿಸಿದ್ದರು. ಕಾಲು ಮುರಿದಾದರೂ ಸರಿ ಕತ್ತರಿಸಿ ಎತ್ತರಕ್ಕೇರದಂತೆ ಕತ್ತರಿ ಹಾಕುವರ ಕಣ್ಣು ಬಿದ್ದದ್ದು ನನ್ನ ಕೆರದ ಮೇಲಾದರೂ, ಒದ್ದೆಯಾದದ್ದು ಮಾತ್ರ ನನ್ನ ಕಣ್ಣು. ಅದಕ್ಕಾಗಿಯೇ ಇರಬೇಕು ಅವನಿಗೆ ನಾನು ಫ್ಲ್ಯಾಟ್ ಆಗಿದ್ದು . ರಾತ್ರಿಯಾದರೆ ಸಾಕು ಲ್ಯಾಟನ್ ಹಿಡಿದು ಫ್ಲ್ಯಾಟ್ ಚಪ್ಪಲಿಯಿದ್ದ ಜಾಗದಲ್ಲಿರುವ ಬಗ್ಗೆ ಹತ್ತು ಸಾರಿ ಎದ್ದೆದ್ದು ನೋಡಿದ್ದು. ಅವನಿಲ್ಲದ ಈ ಹೊತ್ತಲೂ ಚಪ್ಪಲಿ ನೆನಪಲ್ಲಿ ಹುಡುಕಾಟಕ್ಕೆ ಇಳಿದಿದ್ದು. ಹುಡುಕಾಟದ ನಡಿಗೆಯಲಿ ಚಪ್ಪಲಿ ಧರಿಸಿದರೂ ಮುಳ್ಳು ನೆಟ್ಟಿದೆ. ಕಲ್ಲು ಚುಚ್ಚಿದೆ. ಗಾಜು ಪರಚಿದೆ. ಉಂಗುಟ ಕಿತ್ತಿದೆ. ದಾರಿ ಸವೆದಂತೆ ತೊಟ್ಟ ಚಪ್ಪಲಿಯೂ ಸವೆದಿದೆ. ಅರ್ಧ ಶತಕ ದಾಟಿದರೂ ಹೆಜ್ಜೆಗೆ ಗಟ್ಟಿತನ ಈ ಜೋಡಿಂದ. ಇಂತಹ ಜೋಡಿ ಪಾದರಕ್ಷೆಗೆ ಕೃತಜ್ಞತೆ ಹೇಳದಿದ್ದರೆ ನಾ ಮನುಷ್ಯಳಾ..!

ಮನುಷ್ಯಳೆಂದ ಮೇಲೆ ಮತ್ತೆ ಮನುಷ್ಯರು ಹಾಕಿಕೊಳ್ಳುವ ಈ ಚಪ್ಪಲಿಯ ಮೇಲೆಯೆ ನನ್ನ ಕಣ್ಣು ಬಿದ್ದಿದ್ದು. ಇಲ್ಲೂ ಲಿಂಗಭೇದ. ಗಂಡಸರಿಗೊಂದು ಹೆಂಗಸರಿಗೊಂದು. ಅವಳು ಮುಟ್ಟಿ ಮೆಟ್ಟು ನಡೆದರೆ ಬಳ್ಳಿಯಂತೆ ಕುಲಕಬೇಕು. ಹೂವಿನಂತೆ ನಗೆಯರಳಿಸಬೇಕು. ಮಿದುವಾಗಿ ಮೈ ನವಿರೇಳಿಸಬೇಕೆಂದೇನೋ ನಮ್ಮ ಹಿರಿಯರು ಜಾಣರು. ಬಳ್ಳಿಯಂತೆ ಸಣ್ಣ ಉಂಗುಷ್ಟದ ಬಣ್ಣದ ಚಪ್ಪಲಿಯನು ನಮಗೆ ಕಟ್ಟಿದರು. ಬಣ್ಣಕ್ಕೆ ಮರುಳಾಗುವ ಮಾನಿನಿಯರು ನಾವೆಂದು. ಅದೇ ಸಿದ್ಧಾಂತ.

ತೆಪ್ಪಗೆ ಕಾಲಕೆಳಗೆ ಹೊಸಕಿದರೂ, ಹಿಚುಕಿದರೂ, ತೆದಕಿದರೂ ಬಸಿ ಒಡೆಯದೆ ಬಿದ್ದಿರಬೇಕು. ತಮಗೋ ಕಟ್ ಖಟ್ ಖರ ಪುಟ ಕಡಕ್ ಬಿರುಸು ಚಪ್ಪಲಿ. ಅವರು ಹಾಕಿಕೊಳ್ಳುವ ಈ ಮೆಟ್ಟನ್ನು ಕುರಿತ ಅಜ್ಜಿಯ ಕಥೆ ಗುಡಿ ಕಟ್ಟಿ ಮೇಲೆ ಗುಡಿ ಕಟ್ಟಿ ಏರು ಮೊದಲು ಚಪ್ಪಲಿ ಕೆಳಗ ಬಿಟ್ಟೇ ಏರಬೇಕು. ಮನುಷ್ಯ ಏರಬೇಕ ಅಂದರ ಸಣ್ಣತನ ಬಿಡಬೇಕು, ದೇವರ ಮುಂದ ಅಹಂಕಾರ ಇರಬಾರದ ಖೋಡಿಗೋಳ. ಹಾಕ್ಕೊಳ್ಳೋ ಹವಾಯಿ ಡೌಲಿಗಲ್ಲ. ದಾರಿಯೊಳಗ ನಡಿಗಿ ಸರಾಗ ಆಗಲಿ ಅಂತ. ಅಂತಿದ ಅಜ್ಜಿ , ಹವಾಯಿ ದೇಶದ ರಾಜಕುಮಾರ ಚಪ್ಪಲೀನೆ ಹವಾಯಿ ಅಂತ ಸಣ್ಣ ಹುಳಾ ತಲಿಯಾಗ ಬಿಟ್ಟಿದ್ದರೂ ಒಂದಿನಾನಾದರೂ ಹವಾಯಿ ಚಪ್ಪಲಿ ಹಾಕ್ಕೊಳ್ಳಿಲ್ಲ. ಚಪ್ಪಲಿ ಬಿಟ್ಟು 'ದೇವರ ಕಟ್ಟಿ ಮ್ಯಾಲೆ ಕುಂತಿದ್ರು ಮನಸ್ಸು ಚಪ್ಪಲಿ ಹತ್ತರ ಓಡಾಡತಿತ್ತು. ದೇವರ ಹತ್ತಿರ ಬೇಡಿಕೊಂಡು, ದೇವರೆ ಅಜ್ಜಿ ಕಥೆ ಹೇಳಿದ್ದು ನಾವು ಕೇಳಿ ಬಿಡ್ಲಿ, ನಮ್ಮ ಚಪ್ಪಲಿ ಮಾತ್ರ ಯಾರೂ ಹಾಕ್ಕೊಳ್ಳದೆ ಇರ್ಲಿ, ಹೊರಗ ಬಿಟ್ಟ ಚಪ್ಪಲಿ ಮ್ಯಾಲ ಕಣ್ಣ ಇರ್ಲಿ' ಎಂದು ಕಣ್ಣು ಮುಚ್ಚಿ ಬೇಡಿಕೊಂಡಿದ್ದೆ. ಗೊತ್ತಾಯಿತೇನೋ ಚಂಚಲ ಚಪ್ಪಲಿ ಚಪಲದೇಕಿ ನಿನ್ನ ಚಪ್ಪಲಿ ಜವಾಬ್ದಾರಿ ನನಗ. ಎಂದು ನನಗಿರುವ ಚಪ್ಪಲಿ ಚಪಲದ ಚರಿತ್ರೆ ಮುನ್ನುಡಿ ಬರದವಳು ಈ ನೀಲಗಂಗಜ್ಜೀನೆ. ಆಕಿ ಹೇಳಕ ಕುಂತಿದ್ದು ಶಾಕುಂತಲಾ ಕಥಿ, 'ಕುದುರೆ ಏರಿ ಬಂದ, ವನಸುತ್ತಿ ಹತ್ತಿರ ಕಂಡ, ಶಾಕುಂತಲೆಯ ಕರೆದ. ಅವಳ ಕತ್ತಿಗೆ ತಾಳಿ ಬಿಗಿದ. ಕಿರು ಬೆರಳಿಗೆ ಉಂಗುರ ತೊಡಿಸಿದ' ಶುರು ಮಾಡಿದ್ಲು. ನೆನಪಿನ ಚಿತ್ತ ಹಾರಲು ಉಂಗುರ ನುಂಗಿದ್ದು ಮಾತ್ರ ಮೆತ್ತನೆಯ ಮೀನು. ಅಂದೆ, ಚಪ್ಪಲಿ ಚಿತ್ರಕಾಟಿ ದುಷ್ಯಂತ ಹಾಕಿಕೊಂಡ ಚಪ್ಪಲಿ ಎಂತದ್ದು ನೋಡಿದೇನು ಅಂದ್ಲು. ಇಲ್ಲ ಅಂತ ಗೋಣು ಆಡಿಸಿದೆ. ಮಾಣಿಕ್ಯ ಮಾಣಿಕ್ಯ ಹಚ್ಚಿದ ಚಪ್ಪಲಿ ಅವು. ಎಂದಾಗ ಓಓ ಅಂದಿದ್ದೆ. ದೊಡ್ಡವಳಾಗಿ ಇತಿಹಾಸ ಓದುವಾಗ ಜೂಡಿ ಗಾರ್ಲೆಂಡ್ ಹಾಕಿದ್ದು ಮಾಣಿಕ್ಯದ ಚಪ್ಪಲಿ ಎಂದು ತಿಳಿದು, ಊರಿಗೆ ಹೋದಾಗ ಒಂದು ಜೊತಿ ಚಪ್ಪಲಿ ಗಿಫ್ಟ್ ಕೊಟ್ಟು ಬಂದೆ. ಚಂದದ ಚಪ್ಪಲಿ ಮೇಲೆ ಕಣ್ಣಾಕಿದ ಸೊಸಿ ಸಣ್ಣಾಕಿ ಅಂತ ಕೊಟ್ಟು, ಮತ್ತೆ ಬರಿಗಾಲಲಿ ನಡೆದು ಹೋದ ಅಜ್ಜಿ ಈಗ ನೆನಪು ಮಾತ್ರ.

ಚಪ್ಪಲಿ ಇತಿಹಾಸ ಕೇಳಿದ್ದಕ್ಕೆ ಊರು ಉಸಾಬರಿ ಮಾಡತಾಳ ನೀಲಮ್ಮ ನಿನ್ನ ಮಗಳು ಅಂತ ಚಪ್ಪಲಿ ಸಂಬಂಧ ದೂರು ಸ್ವೀಕರಿಸಿದರೂ ಕಟಕಟೆಯಲ್ಲಿ ನಿಂತಿಲ್ಲ ಪುಣ್ಯ. ಅಷ್ಟುದೂರದ ಹೊಲಕೆ ನಡೆವಾಗ ಚಪ್ಪಲಿಯನೆ ಮೆಡದ ಬರೀಗಾಲಲಿ ಮುಳ್ಳು ತುಳಿದಂತೆ, ಆಶ್ರಮದಿಂದ ಅರಮನೆಗೆ ನಡೆದು ಬಂದ ಇಂತಹ ನೂರೆಂಟು ಶಾಕುಂತಲೆಯರ ಕಥೆ ಓದುವಾಗಲೆಲ್ಲ ಮನದ ತುಂಬಾ ಇಂಥದ್ದೇ ತಲ್ಲಣದ ಮುಳ್ಳುಗಳು. ಚಪ್ಪಲಿ ಮೆಟ್ಟ ಪುರುಷಮಣಿಗಳಿಗೇನು ಗೊತ್ತು ಬರಿಗಾಲಲಿ ಮುಳ್ಳು ಮೆಟ್ಟಿ ನಿಂತವಳ ನೋವು.

ಹಿಂಗ ಚಪ್ಪಲಿ ಮೆಟ್ಟುವಾಗೆಲ್ಲ ಒಂದು ಪ್ರಶ್ನೆ ತಲೆ ತಿಂತಿತ್ತು. ನನ್ನ ಚಪ್ಪಲಿ ಅಂಗಾತವೆ ಬಿದ್ದು ಯಾವಾಗ ಒಳಗ ಇಳಿದಾಳೋ ಎನ್ನುವ ಇರಾದೆಯಲ್ಲಿಯೇ ಕಾಯುವ ಕಾಯದಲಿ ಬಾಗಿಲ ಹೊರಗೆ. ಕಾದಿರುವ ಚಪ್ಪಲಿ ಕುರಿತೇ ಕಾರ್ಡಿನಲ್ಲೊಮ್ಮೆ ಪ್ರಶ್ನೆ ಕೇಳಿದ್ದೆ ಬಾಲ್ಯದಲ್ಲಿ. ತಿಣುಕಿ ಪ್ರಶ್ನೆ ಕೇಳಿದವರನ್ನೇ ತಿಣುಕುವಂತೆ ಮಾಡುವ ಉತ್ತರ ಗಾರುಡಿಗರವರು. ಕಾದು ಕಾದು ನಿತ್ಯ ಪೋಸ್ಟ್ ಬಾಗಿಲಿಗೆ ಅಲೆದು ಅಲೆದು ಕಾಲಮರಿ ಹರಿದರೂ, ಕಾಲಮರಿ ಕುರಿತ ಪ್ರಶ್ನೆಗಂತೂ ಉತ್ತರವಿಲ್ಲ. ಕೇಳಬಾರದ ಪ್ರಶ್ನೆಯೇನಲ್ಲವದು. ಇಷ್ಟೇ, ಕಾಲಮರಿ ಮಲಗಿರುತ್ತಾ ಕುಂತಿರುತ್ತಾ? ಉತ್ತರವಿರದ ಇಂತಹ ಪ್ರಶ್ನೆಗಳಿಗೆ ಬಾರಿ ಬಾರಿ ಬೆನ್ನು ಬಿದ್ದಿದ್ದೇನೆ.

ವೆಂಕಪ್ಪ ಮುತ್ಯಾನ ಕಾಲ್ಮರಿ ಕಥಿ. ಟೈಯರ್ ಕೊರೆಸಿ ಚಪ್ಪಲಿ ಮಾಡಿಸಾಕ ನಾಲ್ಕಾಣೆ ಕೊಟ್ಟಿದ್ದನಂತೆ. ಕೆರೆಗೆ ಹೋಗಿ ಪಾಸ್‌ಸೇಕ್ (501) ಸಾಬೂನ್ ಹಚ್ಚಿ ಮೈ ತೊಳಕೊಂಡರೂ ಚಪ್ಪಲಿ ತೊಳಿತಿದ್ದಿಲ್ಲ. ಎಲ್ಲಿ ತೊಳದ್ರ ಸವಿತಾವೋ ಹರಿತಾವೋ ಅನ್ನೋ ಆತಂಕ. ಸಾಯೋಕಾಲಕ್ಕೆ ತನ್ನ ಮಕ್ಕಳನ್ನ ಕಾಲಿನ ಚಪ್ಪಲಿಗಾಗಿ ಕೈ ಒಡ್ಡಬಾರದು ಅಂತಿದ್ದ. ಸತ್ತಾಗ ಒಂದು ಹಳೇ ಧೋತ್ರ ಸಿಗದಿದ್ದರೂ, ನಾಲ್ವತ್ತು ವರ್ಷ ಹಾಕ್ಕೊಂಡಿದ್ದ ಟೈಯರ್ ಚಪ್ಪಲಿ ಸವೆದಿರಲಿಲ್ಲ, ಆಗೇನರ ಜಗತ್ತು ಆಗ ಅವನ ಕಡೆ ಹೊರಳಿ ನೋಡಿದ್ರ ಇಪ್ಪತ್ತು ವರ್ಷ ಒಂದೇ ಜೊತಿ ಚಪ್ಪಲಿ ಮೆಟ್ಟಿದ್ದ ದಿ ಸ್ಲಿಪ್ಪರ್ ಮ್ಯಾನ್ ಡೆರೋನ ಬದಲು ವೆಂಕಪ್ಪಜ್ಜನೇ ಗಿನ್ನೆಸ್ ದಾಖಲೆಯಾಗತಿದ್ದ. ರಿಕಾರ್ಡ ಮಾಡಿದವನ ರಗಟಿಗಳು ಸುಟ್ಟ ಇಟ್ಟಂಗಿ ಹಂಗ ಸಾಕ್ಷಿಯಾಗಿ ಬಾಗಿಲ ಮುಂದ ಕುಂತಿದ್ದು ನೋಡಿ ಕಣ್ಣೀರಾಗಿದ್ದು ಅಜ್ಜನ ಬಡತನದ ಬವಣೆಗೋ, ಚಪ್ಪಲಿ ಮೇಲಿನ ಕನಿಕರಕೋ ತಿಳಿಲಿಲ್ಲ.

ಹೊಸ ಚಪ್ಪಲಿ ತರುವುದರಲ್ಲಿ ನಮ್ಮ ಬಾಬಾನದೂ ಎತ್ತಿದ ಕೈ. 'ಕೊಂಡು ತಂದ ಚಪ್ಪಲಿ ಕಳಕೋಬಾರದು, ಕದ್ದ ಚಪ್ಪಲಿ ಹಾಕ್ಕೋ ಬಾರದು' ಅಂತ ಕಿವಿ ಹಿಂಡಿ ಕಳಿಸಿದ್ದ ಅವ್ವನ ಮಾತಿನಂತೆ ಕನ್ನಡ ಸಾಲಿಯೊಳಗ ಚಪ್ಪಲಿ ಕಳಕೊಂಡಿದ್ದೆ. ಹುಡುಕಿದರ ಚಪ್ಪಲಿ ಬಸಣ್ಣೆ ಪಾಟಿ ಚೀಲದಾಗ ಮುದುಡಿ ಮಲಕೊಂಡಿದ್ದು ಕಂಡು, ಮಗಳ ಚಪ್ಪಲಿ ತಗೊಂಡು ಹೊಡಿಬೇಕ ನಿನಗ, ಎದಿ ಸೀಳಿದರ ಎರಡ ಅಕ್ಷರ ಯಾಕಿಲ್ಲ, ಚಪ್ಪಲಿ ಸರಸ್ವತಿ ಜೊತಿಗಿ ಇಟ್ಟಿ ಅಂತ ಬೈದಿದ್ದೆ. ಆದರ ಕಾರಣ ಕೇಳಿ ಮಮ್ಮಲ ಮರಗಿ ಚಪ್ಪಲಿ ವಾಪಾಸ ಆಕಿ ಮನಿ ಮುಂದ ಬಿಟ್ಟ ಬಂದಿದ್ದೆ. ಅವರಕ್ಕ ಚಪ್ಪಲಿ ಕೊಡಿಸದೆ ಗಂಡನ ಮನಿಗೆ ಹೋಗೋದಿಲ್ಲ, ಡಾಂಬರ್ ಹೊರಾಕ ಬರಿಗಾಲಲೆ ಕಳಸ್ತಾರ ಎಂದು ಮೂಲಿ ಹಿಡಿದು ಕುಂತಿದ್ದು ಬಸಣ್ಣೆ ಹೇಳುವಾಗ ಅಕಿ ಕಣ್ಣೀರು ನನ್ನ ಚಪ್ಪಲಿ ಮೇಲೆ ತೊಟ್ಟಿಕ್ಕಿದ್ದು. ಕದ್ದದ್ದಕ್ಕೆ ಕಾರಣ ಅಂತ ತಿಳಿದಾಗ ಮೆತ್ತಗ ಅವರ ಮನಿ ಮುಂದ ಹೋಗಿ ಮೆತ್ತನೆಯ ಚಪ್ಪಲಿ ಬಿಟ್ಟು ಮನಿಗೆ ಬರಿಗಾಲಲಿ ಬಂದದ್ದು ಯಾರಿಗೂ ಹೇಳಲಿಲ್ಲ.

ಇದು ಆದ ಮೂರು ದಶಕ ಆದ ಮೇಲೆ ಬೆಂಗಳೂರಿನ ಒಂದು ದೇವಸ್ಥಾನಕ್ಕೆ ಹೋಗಿದ್ದೆ, ದೇವರಿಗೆ ಬರುವಾಗ ಚಪ್ಪಲಿ ಬಿಟ್ಟು ಬರೀಗಾಲಲಿ ಬರಬೇಕು ಅನ್ನೋ ವೇದವಾಕ್ಯ ಪರಿಪಾಲಕಿಯಂತೆ. ಕಾರ್‌ನಲ್ಲಿ ಇಡಿ ಮನಿ ಮಂದಿ ಚಪ್ಪಲಿ ಬಿಡಿಸಿ ಅವರೊಂದಿಗೆ ನಾನೂ ಬರೀಗಾಲಲಿ ಹೊಂಟಿದ್ದೆ. ಯಾರೋ ಕರೆದರೆಂದು ಹೊರಳಿದೆ. ದಢೂತಿ ಹೆಂಗಸು. ನನ್ನ ಹಿಂದೇನೇ. ನಾನೇನೋ ಆಕಿ ಚಪ್ಪಲಿ ಹಾಕ್ಕೊಂಡು ಹೋಟೇನಿ ಅನ್ನೋರಂಗ ಬಂದು